

ಲಹರಿಯಲ್ಲೆ ಲೀನವಾದ ಇಡಿ ವಾರ ಹನುಮಪ್ಪ ಮೌನಕ್ಕೆ ಶರಣಾದ.

ಬಸವರಾಜಪ್ಪ ಹೇಳಿದ ದಿನದ ಹಿಂದಿನ ರಾತ್ರಿ ಹನುಮಪ್ಪನಿಗೆ ಬೇಗನೆ ನಿದ್ದೆ ಬರಲೇಯಿಲ್ಲ. ಎಷ್ಟೋ ಮಗ್ಗುಲುಗಳು ಬದಲಾದರು, ಹೆಂಡತಿ ಕಾಳಮ್ಮ ಗಂಡನ ಈ ಹೊರಳಾಟವನ್ನು ಗಮನಿಸುತ್ತಲೇ ನಿದ್ದೆಗೆ ಜಾರಿದ್ದಳು. ಸರಿಹೊತ್ತಿನ ರಾತ್ರಿಯ ಅದೆಷ್ಟೋ ಹೊತ್ತಿಗೆ ಈತನು ನಿದ್ದೆಗೆ ಜಾರಿದ್ದರು ನಸುಕಿನ ಹೊತ್ತಿಗೆ ಎದ್ದವನು ದನಕರುಗಳನ್ನು ಬಯಲಿಗೆ ಕಟ್ಟಿ ಹೊಲಕ್ಕೆ ಹೋಗಿ ಹುಲ್ಲುಕಿತ್ತಕ್ಕೊಂಡು ಮನೆಗೆ ಬರೋವೊತ್ತಿಗೆ ಕಾಳಮ್ಮ ಮುದ್ದೆ ಕಿವುಸೆಸರು ಮಾಡಿದ್ದಳು. ಬೇಗಬೇಗನೆ ಕೈಕಾಲು ಮುಖ ತೊಳಕೊಂಡು ಹೆಂಡತಿ ಇಟ್ಟಕೊಟ್ಟ ಊಟವ ಗಬಗಬನೆ ತಿಂದು ಯಥಾಸ್ಥಿತಿ ಬಿಳಿ ಬಟ್ಟೆಯಲ್ಲಿ ಚಂದ್ರಾಪುರದ ಬಸ್ ಹತ್ತಿದ್ದ. ಹೋಗುವಾಗ ಬಸವರಾಜಪ್ಪ ಹೇಳಿದ್ದ ದಾಖಲೆಗಳನ್ನು ಮರೆಯಲಿಲ್ಲ, ಸೀದ ಬಂದವನೆ ನಾಡಕಚೇರಿ ಮುಂದಿದ್ದ ಅದೇ ಕಲ್ಲಿನ ಮೇಲೆ ಪಟ್ಟವಾಗಿದ್ದ ಆ ದಿನ ಸರಿಯಾದ ಸಮಯಕ್ಕೆ ಬಂದ ಬಸವರಾಜಪ್ಪ ಈತನನ್ನು ನೋಡಿದ ತಕ್ಷಣವೇ ಹತ್ತಿರಕ್ಕೆ ಬಂದು 'ಹನುಮಪ್ಪ ಊಟ ಮಾಡ್ಕಂಡ್ ಬಂದಾ?' ಎನ್ನುತ್ತಲೇ ಮಾತು ಮುಂದುವರೆಸಿ 'ಎಲ್ರುಗೂ ಹೇಳಿದ್ದೇನೆ, ಡಿ.ಸಿ. ಯವರು ಮೌಖಿಕವಾಗಿ ಅದೇಶ ನೀಡಿದ್ದಾರಂತೆ. ಪೌತಿ ಖಾತೆ ವಿಚಾರದಲ್ಲಿ ರೈತರ ಕೆಲಸಗಳನ್ನು ಸತಾಯಿಸದೆ ಮಾಡಿಕೊಡಬೇಕು ಎಂದು. ಹಾಗಾಗಿ ನಿನ್ನ ಕೆಲಸ ಬೇಗನೆ ಆಗುತ್ತೆ' ಎಂದು ಹೇಳುವಾಗ, ಹನುಮಣ್ಣನ ಮುಖದಲ್ಲಿ ನೆಮ್ಮದಿಯ ಸಂತೋಷ ಇಣುಕುತ್ತಿತ್ತು. 'ಅಮೇಲೆ ಒಂದು ವಂಶವೃಕ್ಷ ಮಾಡಿಸಬೇಕು ಬಾ' ಎಂದು ಈತನ್ನ ಅಲ್ಲೇ ಪಕ್ಕದಲ್ಲಿದ್ದ ಒಂದು ಕಂಪ್ಯೂಟರ್ ಸೆಂಟರ್‌ಗೆ ಕರಕೊಂಡು ಹೋಗಿ ಈತನಿಂದಲೇ ಹೇಳಿಸಿಕೊಂಡು ಟೈಪ್ ಮಾಡಿಸಿದ್ದ ಒಂದು ವಂಶವೃಕ್ಷದ ಕಾಪಿಯನ್ನು ತೆಗೆಸಿಕೊಂಡು ಅಂಗಡಿಯವನಿಗೆ ಹನುಮಪ್ಪನಿಂದಲೇ ನೂರು ರೂಪಾಯಿ ಕೊಡಿಸಿ' ಈ ವಂಶವೃಕ್ಷಕ್ಕೆ ಲಾಯರ್‌ದು ನೋಟರಿ ಮಾಡಿಸಬೇಕು. ಹಂಗಾಗಿ ಒಂದು ಇನ್ನೂರು ಇದ್ದರೆ ಕೊಡಿಲ್ಲಿ' ಎಂದಾಗ ಹನುಮಪ್ಪ ಪಂಚೆ ಒಳಗಿನ